EQUIFAX

sidbi

# ಮೈಕ್ರೋಫೈನಾನ್ಸ್ ಪಲ್ಸ್

ಸಂ.೦೯ - ಜುಲೈ ೨೦೨೧



# ಅನಲಿಟಿಕಲ್ ಕಾಂಟ್ಯಾಕ್ಟ್ಸ


## Equifax

ಕಿರಣ್ ಸಮುದ್ರಲ

ವಿ ಪಿ - ಅನಲಿಟಿಕ್ಸ್

ಕಿರಣ್.ಸಮುದ್ರಲ@ಈಕ್ವಿಫ್ಯಾಕ್ಸ್.ಕಾಂ

ಶ್ರುತಿ ಜೋಷಿ
ಎವಿಪಿ - ಅನಲಿಟಿಕ್ಸ್
ಶ್ರುತಿ.ಜೋಷಿ@ಈಕ್ವಿಫ್ಯಾಕ್ಸ್.ಕಾಂ

ವಂದನಾ ಪಾಂಚಾಲ್

ಸೀನಿಯರ್ ಎಗ್ಸಿಕ್ಯುಟಿವ್
- ಅನಲಿಟಿಕ್ಸ್

ವಂದನಾ.ಪಾಂಚಾಲ್@ ಈಕ್ವಿಫ್ಯಾಕ್ಸ್.ಕಾಂ

## SIDBI

ಕೈಲಾಶ್ ಚಂದರ್ ಭಾನೂ, ಸಿಜಿಎಂ-
ಸಿಎಸ್&ಆರ್ ವಿ - ಇಆರ್ ಡಿಎ
ಇ ಆರ್ ಡಿ ಎ ವಿ@ಸಿಡ್ಬಿ.ಇನ್

ರಂಗದಾಸ್ ಪ್ರಭಾವತಿ

ಡಿಜಿಎಂ- ಸಿಎಸ್&ಆರ್ ವಿ - ಇಆರ್ ಡಿಎ
ಇ ಆರ್ ಡಿ ಎ ವಿ@ಸಿಡ್ಬಿ.ಇನ್
ರಮೇಶ್ ಕುಮಾರ್ ಎ ಎಂ -- ಸಿಎಸ್&ಆರ್ ವಿ -
ಇಆರ್ ಡಿಎ

ರಮೇಶ್ ಕೆ@ ಸಿಡ್ಬಿ.ಇನ್

# ಪರಿವಿಡಿ


- ಕಾರ್ಯಪಾಲಕ ಸಾರಾಂಶ ೦೪
- ಸಂಕ್ಷೇಪಣ ಮತ್ತು ಪದಕೋಶ ೦೫
- ಅತಿ ಸಣ್ಣ ಹಣಕಾಸು ಕೈಗಾರಿಕೆ ಅವಲೋಕನ ೦೭
- ವಿತರಣಾ ಪ್ರವೃತ್ತಿ ೦೯
- ಅಪಾಯಗಳ ಚಿತ್ರಣ ೧೨
- ಭೌಗೋಲಿಕ ಅನಾವರಣ ೧೪
- ಕರ್ನಾಟಕ ರಾಜ್ಯ ಸಮಗ್ರ ಚಿತ್ರಣ ೧೭
- ಮಹತ್ವಾಕಾಂಕ್ಷೆಯ ಜಿಲ್ಲೆಗಳು ೨೨
- ಕೊವಿಡ್ ೧೯ ಮತ್ತು ಜಾಗತಿಕ ಪ್ರವೃತ್ತಿ ೨೪

# ಕಾರ್ಯಪಾಲಕ ಸಾರಾಂಶ

ಕೊವಿಡ್ ೧೯ರಿಂದ ಪೂರೈಕೆಯ ಸರಪಳಿ ಮತ್ತು ವ್ಯಾಪಾರೀ ಕಾರ್ಯಾಚರಣೆಗಳಿಗೆ ಬಿದ್ದ ಪೆಟ್ಟಿನಿಂದ ಅತಿ ಸಣ್ಣ ಉದ್ದಿಮೆಗೆ, ಅದರಲ್ಲಿಯೂ ಕಡಿಮೆ ಆದಾಯದ ಗುಂಪುಗಳಿಗೆ ದೊಡ್ಡ ಹೊಡೆತ ಬಿದ್ದಿದೆ. ಮಾರ್ಚ್ ೨೦೨೧ರ ಮಾಹಿತಿಯನ್ನಾಧರಿಸಿದ ಮೈಕ್ರೋಫೈನಾನ್ಸ್ ಪಲ್ಸ್ ನ ೯ನೇ ಮುದ್ರಣವು ಅತಿ ಸಣ್ಣ ಉದ್ದಿಮೆಯ ಪ್ರವೃತ್ತಿ ಮತ್ತು ಅಭಿವೃದ್ಧಿಯನ್ನು ವಿಶದವಾಗಿ ವಿವರಿಸುತ್ತದೆ.

೩೧ ಮಾರ್ಚ್ ೨೦೨೧ಕ್ಕೆ ಅತಿ ಸಣ್ಣ ಉದ್ದಿಮೆಯ ಸಾಲಬಾಕಿಯು ೨೪೯೨೭೭ ಕೋಟಿ ರೂಪಾಯಿಗಳಷ್ಟಿದೆ. ಇದರಲ್ಲಿ ಶೇಕಡಾ ೭೫ರಷ್ಟು ಬ್ಯಾಂಕುಗಳು ಮತ್ತು ಎನ್ ಬಿ ಎಫ್ ಸಿ- ಎಂಎಫ್ ಐಯದ್ದು. ಅತಿ ಸಣ್ಣ ಉದ್ದಿಮೆಯು ಮಾರ್ಚ್ ೨೦೨೦ರಿಂದ ಮಾರ್ಚ್ ೨೦೨೧ರವರೆಗೆ ಸಾಲಬಾಕಿಯಲ್ಲಿ ಶೇಕಡಾ ೧೮ರಷ್ಟು ವೈಓವೈ ಬೆಳವಣಿಗೆಯನ್ನು ದಾಖಲಿಸಿದೆ. ಈ ಮೂಲಕ ಇದರ ಸ್ಥಿತಿಸ್ಥಾಪಕತ್ವವನ್ನೂ, ಚೇತರಿಕೆಯನ್ನು ಮತ್ತು ಕೊವಿಡ್ ಪೂರ್ವ ಸ್ಥಿತಿಗೆ ಮರಳಿರುವುದನ್ನೂ ನಾವು ಕಾಣಬಹುದು. ಸಾಲದಾತರ ಯಾದಿಯಲ್ಲಿ ಬ್ಯಾಂಕುಗಳು ಮಾರುಕಟ್ಟೆಯ ಪಾಲಿನಲ್ಲಿ ಸ್ಥಿರವಾಗಿ ಹೆಚ್ಚಳ ತೋರಿಸುತ್ತ ಅತಿ ಹೆಚ್ಚು, ಅಂದರೆ ಶೇಕಡಾ ೩೬ರಷ್ಟು ವೈಓವೈ ಬೆಳವಣಿಗೆಯನ್ನು ಸಾಧಿಸಿವೆ.

ಅತಿ ಸಣ್ಣ ಉದ್ದಿಮೆಯು ಜನವರಿ ೨೦೨೧ ರಿಂದ ಮಾರ್ಚ್ ೨೦೨೧ರವರೆಗೆ ಸುಮಾರು ೯೩೧೦೦ ಕೋಟಿ ರೂಪಾಯಿಗಳಷ್ಟು ಹಣವನ್ನು ವಿತರಣೆ ಮಾಡಿದೆ. ಜನವರಿ, ಫೆಬ್ರುವರಿ, ಮಾರ್ಚ್ ೨೦೨೦ ತ್ರೈಮಾಸಿಕದಿಂದ ಜನವರಿ, ಫೆಬ್ರುವರಿ, ಮಾರ್ಚ್ ೨೦೨೧ರ ತ್ರೈಮಾಸಿಕದವರೆಗೆ ಸಾಲ ಹಣದ ಮೊತ್ತವನ್ನು ನೋಡಿದಾಗ ವೈಓವೈ ಬೆಳವಣಿಗೆಯು ಶೇಕಡಾ ೧೭ ಮತ್ತು ಶೇಕಡಾ ೨೬ ಎಂಬುದಾಗಿ ಕಂಡು ಬರುತ್ತದೆ. ಸಾಲ ನೀಡಿಕೆಯಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಬ್ಯಾಂಕುಗಳೇ ಅತಿ ಹೆಚ್ಚಿನ ಕೊಡುಗೆ ನೀಡಿವೆ. ಅಕ್ಟೋಬರ್, ನವೆಂಬರ್, ಡಿಸೆಂಬರ್ ೨೦೨೦ರಿಂದ ಜನವರಿ, ಫೆಬ್ರವರಿ, ಮಾರ್ಚ್ ೨೦೨೧ರವರೆಗೆ ಸಾಲಗಳ ಸಂಖ್ಯೆ ಮತ್ತು ಎ ಟಿ ಎಸ್, ಶೇಕಡಾ ೧೯ರಷ್ಟು ಬೆಳೆವಣಿಗೆ ತೋರಿಸಿವೆ.

ಹೀಗೆ ಈ ಉದ್ದಿಮೆಯ ಒಟ್ಟಾರೆ ಸಾಮರ್ಥ್ಯವು ಹೆಚ್ಚುತ್ತಿರುವಾಗಲೇ, ಡೆಲಿಕ್ವೆನ್ಸಿ ಬಕೆಟುಗಳಲ್ಲಿ ಸುಧಾರಣೆ ಕಂಡು ಬಂದಿದ್ದು, ಡಿಸೆಂಬರ್ ೨೦೨೦ಕ್ಕಿಂತ ಮಾರ್ಚ್ ೨೦೨೧ರಲ್ಲಿ ಪರಿಸ್ಥಿತಿ ಸಾಕಷ್ಟು ಸುಧಾರಿಸಿದೆ.

ಪಶ್ಚಿಮ ಬಂಗಾಳವು ಅತಿ ಹೆಚ್ಚಿನ ಪಿಓಎಸ್ ಹೊಂದಿದ್ದು, ಅದರ ವೈಓವೈ ಬೆಳವಣಿಗೆಯು ಶೇಕಡಾ ೨೫%. ಈ ಮೊತ್ತವು ಉದ್ದಿಮೆಯ ಬೆಳವಣಿಗೆಯ ದರವಾದ ಶೇಕಡಾ ೧೮ಕ್ಕಿಂತ ಹೆಚ್ಚು. ಮಾರ್ಚ್ ೨೦೨೦ರಲ್ಲಿ ೫ನೆ ಸ್ಥಾನದಲ್ಲಿದ್ದ ಮಹಾರಾಷ್ಟ್ರವು ಮಾರ್ಚ್ ೨೦೨೧ರಲ್ಲಿ ೪ನೆ ಸ್ಥಾನಕ್ಕೇರಿದೆ. ಕರ್ನಾಟಕವನ್ನು ಹೊರತು ಪಡಿಸಿದರೆ, ಬೇರೆಲ್ಲ ರಾಜ್ಯಗಳ ೯೦+ ಡೆಲಿಕ್ವೆನ್ಸಿ  ಮಾರ್ಚ್ ೨೦೨೦ಕ್ಕಿಂತ ಮಾರ್ಚ್ ೨೦೨೧ರಲ್ಲಿ ಹೆಚ್ಚಿದೆ.

ಎಂ ಎಫ್ ಐ ಯಲ್ಲಿ ಮೇಲ್ಸ್ತರವನ್ನು ಕೇಂದ್ರೀಕರಿಸುವ ನಮ್ಮ ಪ್ರಕ್ರಿಯೆಯಲ್ಲಿ ಕರ್ನಾಟಕ ರಾಜ್ಯದ ಸಮಗ್ರ ಚಿತ್ರಣವನ್ನು ಈ ಮುದ್ರಣದಲ್ಲಿ ತರುತ್ತಿದ್ದೇವೆ. ಮಾರ್ಚ್ ೩೧, ೨೦೨೧ರಲ್ಲಿ ಕರ್ನಾಟಕದ ಪೋರ್ಟ್ ಫೋಲಿಯೋ ಸಾಲ ಬಾಕಿಯು ೨೦೩೩೦ ಕೋಟಿ ರೂಪಾಯಿಗಳು ಮತ್ತು ಇದು ಮಾರ್ಚ್ ೨೦೨೦ರಿಂದ ಮಾರ್ಚ್ ೨೦೨೧ರವರೆಗೆ ಶೇಕಡಾ ೧೬ರಷ್ಟು ವೈಓವೈ ಪ್ರಗತಿಯನ್ನು ಸಾಕ್ಷೀಕರಿಸಿದೆ. ಕರ್ನಾಟಕ ರಾಜ್ಯದಲ್ಲಿ ಜೆಎಫ್ಎಂ ೨೦೨೦ರಿಂದ ಜೆಎಫ್ಎಂ ೨೦೨೧ರವರೆಗೆ ಸಾಲ ಮೂಲವು ಶೇಕಡಾ ೧೨ರಷ್ಟು ವೈಓವೈ ಪ್ರಗತಿಯನ್ನು ಸಾಧಿಸಿದೆ. ಒಟ್ಟಾರೆಯಾಗಿ ಹೇಳುವುದಾದರೆ ಕರ್ನಾಟಕ ರಾಜ್ಯದಲ್ಲಿ ೯೦+ ಡೆಲಿಕ್ವೆನ್ಸಿ ಮಾರ್ಚ್ ೨೦೨೦ರಿಂದ ಮಾರ್ಚ್ ೨೦೨೧ರವರೆಗೆ ಶೇಕಡಾ ೨.೪೧ರಿಂದ ಶೇಕಡಾ ೧.೭೩ಕ್ಕೆ ಇಳಿದಿದೆ.

ಈ ಮುದ್ರಣದಲ್ಲಿ, ಕೊವಿಡ್ ಬಿಕ್ಕಟ್ಟಿನ ಕಾರಣದಿಂದ ಬೇರೆ ಬೇರೆ ಭೂಭಾಗಗಳಾದ ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮ ಕರ್ನಾಟಕದಲ್ಲಿ ಸಂಭವಿಸಿದ ನಷ್ಟದ ಬಗ್ಗೆ ವಿಷದವಾಗಿ ವಿವರಿಸಲಾಗಿದೆ. ಒಟ್ಟು ಸಾಲ ವಿತರಣೆಯಲ್ಲಿ ಪೂರ್ವ ದಿಕ್ಕು ಅತಿ ಹೆಚ್ಚಿನ, ಅಂದರೆ ಶೇಕಡಾ ೪೫ರಷ್ಟು ಕೊಡುಗೆಯನ್ನಿತ್ತಿದೆ. ಸಾಲ ವಿತರಣೆಯಲ್ಲಿ ಬ್ಯಾಂಕುಗಳ ಮಾರುಕಟ್ಟೆ ಪಾಲು ಮಾರ್ಚ್ ೨೦೨೦ರಿಂದ ಮಾರ್ಚ್ ೨೦೨೧ರವರೆಗೆ ಎಲ್ಲ ಭೂಭಾಗಗಳಲ್ಲಿಯೂ ಹೆಚ್ಚಿದೆ. ದಕ್ಷಿಣ ಭೂಭಾಗವು ಜೆಎಫ್ಎಂ ೨೦೨೦ರಿಂದ ಜೆಎಫ್ಎಂ ೨೦೨೧ರವರೆಗೆ ಅತಿ ಹೆಚ್ಚು, ಅಂದರೆ ಶೇಕಡಾ ೧೩ರಷ್ಟು ವೈಓವೈ ಎಟಿಎಸ್ ಬೆಳವಣಿಗೆಯನ್ನು ದಾಖಲಿಸಿದೆ.


# ಸಂಕ್ಷೇಪಣ ಮತ್ತು ಪದಕೋಶ

- ಎಟಿಎಸ್ (ಸರಾಸರಿ ಟಿಕೆಟ್ ಗಾತ್ರ) = ವಿತರಿಸಿದ ಸಾಲ ಮೊತ್ತ / ಸಾಲಗಳ ಸಂಖ್ಯೆ
- ದಿಪಿಡಿ = ಡೇಸ್ ಪಾಸ್ಟ್ ಡ್ಯೂ
- ಲೈವ್ ಪಿಓಎಸ್ ಅಥವಾ ಸಾಲಗಾರರು ಅಥವಾ ಜೀವಂತ ಸಾಲಗಳ ಸಂಖ್ಯೆ = ೦ ಇಂದ ೧೭೯ ದಿಪಿಡಿ + ಹೊಸ ಖಾತೆಗಳು + ಚಾಲ್ತಿ ಖಾತೆಗಳು
- ಎಂಎಫ್ಐ = ಅತಿ ಸಣ್ಣ ಉದ್ಯಮ ಸಂಸ್ಥೆ
- ಪಿಓಎಸ್ = ಪೋರ್ಟ್ ಫೋಲಿಯೋ ಸಾಲಬಾಕಿ
- ಯುಟಿ = ಯೂನಿಯನ್ ಟೆರಿಟರಿ
- ಮಹತ್ವಾಕಾಂಕ್ಷೆಯ ಜಿಲ್ಲೆಗಳು (ಎಡಿ) - (ಪ್ರಸ್ತುತ೧೧೭) ಜನವರಿ ೨೦೧೮ರಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಮತ್ತು ಅದರ ಮೂಲಕ ಆಹಾರ, ಆರೋಗ್ಯ, ಶಿಕ್ಷಣ, ಕೃಷಿ ಮತ್ತು ಜಲಮೂಲಗಳು, ಆರ್ಥಿಕ ಸೇರ್ಪಡೆ, ಕೌಶಲ ಅಭಿವೃದ್ಧಿ, ಮತ್ತು ಮೂಲಭೂತ ಸೌಕರ್ಯಗಳು ಇವಕ್ಕಾಗಿ ಭಾರತ ಸರ್ಕಾರದ ನೀತಿ ಆಯೋಗದಿಂದ ಗುರುತಿಸಲ್ಪಟ್ಟ ಜಿಲ್ಲೆಗಳು.
- ೧-೧೭೯ = ೧ರಿಂದ ೧೭೯ ಡಿಪಿಡಿ / ಲೈವ್ ಪಿಓಎಸ್
- ೧-೨೯=೧ರಿಂದ ೨೯ ಡಿಪಿಡಿ / ಲೈವ್ ಪಿಓಎಸ್
- ೩೦-೫೯ = ೩೦ರಿಂದ ೫೯ ಡಿಪಿಡಿ / ಲೈವ್ ಪಿಓಎಸ್
- ೬೦-೮೯ = ೬೦ರಿಂದ ೮೯ ಡಿಪಿಡಿ / ಲೈವ್ ಪಿಓಎಸ್
- ೯೦-೧೭೯ = ೯೦ರಿಂದ ೧೭೯ ಡಿಪಿಡಿ / ಲೈವ್ ಪಿಓಎಸ್
- ೩೦+ ಅಪರಾಧಿತ್ವ = ೩೦-೧೭೯ ಡಿಪಿಡಿ / ಲೈವ್ ಪಿಓಎಸ್
- ೯೦+ಅಪರಾಧಿತ್ವ = ೯೦-೧೭೯ ಡಿಪಿಡಿ / ಲೈವ್ ಪಿಓಎಸ್
- ಜೆಎಫ್ಎಂ '೨೦ = ಜನವರಿ ೨೦೨೦ರಿಂದ ಮಾರ್ಚ್ ೨೦೨೦
- ಎಎಂಜೆ '೨೦ = ಎಪ್ರಿಲ್ ೨೦೨೦ರಿಂದ ಜೂನ್ ೨೦೨೦
- ಜೆಎಎಸ್ '೨೦ = ಜುಲೈ೨೦೨೦ರಿಂದ ಸೆಪ್ಟೆಂಬರ್ ೨೦೨೦
- ಓಎನ್ ಡಿ '೧೯ = ಅಕ್ಟೋಬರ್ ೨೦೨೦ರಿಂದ ಡಿಸೆಂಬರ್ ೨೦೨೦
- ಜೆಎಫ್ಎಂ '೨೧ = ಜನವರಿ ೨೦೨೧ರಿಂದ ಮಾರ್ಚ್ ೨೦೨೧

# ಅತಿ ಸಣ್ಣ ಉದ್ದಿಮೆಯ ಅವಲೋಕನ



# ಅತಿ ಸಣ್ಣ ಉದ್ದಿಮೆಯ ಚಿತ್ರ- ೩೧-ಮಾರ್ಚ್-೨೦೨೧ಕ್ಕೆ




| ೩೧-೦೩-೨೦೨೧ರ ಚಿತ್ರ | ಬ್ಯಾಂಕುಗಳು | ಎಸ್ ಎಫ್ ಬಿ | ಎನ್ ಬಿ ಎಫ್ ಸಿ-ಎಂಎಫ್ ಐ | ಎನ್ ಬಿ ಎಫ್ ಸಿ | ಲಾಭಕ್ಕಾಗಿ ಅಲ್ಲದ ಎಂಎಫ್ ಐ | ಒಟ್ಟಾರೆ ಉದ್ದಿಮೆ |
|---|---|---|---|---|---|---|
| ವಿಶಿಷ್ಟ ಜೀವಂತ ಸಾಲಗಾರರು(೦೦೦) | 27,359 | 13,531 | 24,700 | 7,297 | 846 | 73,733 |
| ಚಾಲ್ತಿಯಲ್ಲಿರುವ ಸಾಲಗಳು ('000) | 41,529 | 16,779 | 36,368 | 7,866 | 1,108 | 103,650 |
| ಪೋರ್ಟ್ ಫೋಲಿಯೋ (ಕೋಟಿ ರೂಗಳಲ್ಲಿ) | 109,867 | 38,903 | 79,420 | 18,992 | 2,095 | 249,277 |
| ವಿತರಣೆಯಾದ ಮೊತ್ತ (ಕೋಟಿ ರೂಗಳಲ್ಲಿ) - ಜೆಎಫ್ಎಂ'೨೧ | 48,665 | 11,603 | 27,395 | 4,671 | 766 | 93,100 |
| ಸರಾಸರಿ ಟಿಕೆಟ್ ಗಾತ್ರ (ರೂಗಳಲ್ಲಿ) - ಜೆಎಫ್ಎಂ'೨೧ | 43,417 | 36,993 | 35,223 | 41,256 | 32,037 | 39,627 |
| ೩೦+ ಅಪರಾಧಿತ್ವ (ಪಿಓಎಸ್) | 10.63% | 8.06% | 7.15% | 10.56% | 1.72% | 9.04% |
| ೯೦+ ಅಪರಾಧಿತ್ವ (ಪಿಓಎಸ್) | 4.81% | 3.51% | 3.33% | 5.06% | 0.95% | 4.12% |


- ಮಾರ್ಚ್ ೨೦೨೧ರಲ್ಲಿ ಅತಿ ಸಣ್ಣ ಉದ್ದಿಮೆಯ ಪೋರ್ಟ್ ಫೋಲಿಯೋ ಸಾಲಬಾಕಿ ರೂ.೨೪೯,೨೭೭ ಕೋಟಿಗಳಷ್ಟಿತ್ತು.
- ಪಿಓಎಸ್ ಗೆ ಶೇಕಡಾ ೭೫ಕ್ಕಿಂತ ಹೆಚ್ಚಿನ ಕೊಡುಗೆ ಬ್ಯಾಂಕುಗಳು ಮತ್ತು ಎನ್ ಬಿ ಎಫ್ ಸಿ-ಎಂಎಫ್ ಐ ಗಳದು.
- ಜೆಎಫ್ಎಂ'೨೧ ನಲ್ಲಿ ವಿತರಣಾ ಮೊತ್ತವು ರೂ.೯೩೧೦೦ ಕೋಟಿಗಳು. ಇದರಲ್ಲಿ ಶೇಕಡಾ ೫೨ ಬ್ಯಾಂಕುಗಳದು ಮತ್ತು ಶೇಕಡಾ ೨೯ ಎನ್ ಬಿ ಎಫ್ ಸಿ-ಎಂಎಫ್ ಐ ಗಳದು.
- ಎನ್ ಬಿ ಎಫ್ ಸಿ-ಎಂಎಫ್ ಐ, ಎಸ್ ಎಫ್ ಬಿ ಮತ್ತು ಲಾಭಕ್ಕಾಗಿ ಅಲ್ಲದ ಎಂಎಫ್ ಐಗಳ ೩೦+ ಮತ್ತು ೯೦+ ಅಪರಾಧಿತ್ವವು ಉದ್ದಿಮೆಯ ಅಪರಾಧಿತ್ವಕ್ಕಿಂತ ಕಡಿಮೆ.

**Note:** In MFI segment there are ~6 crore unique live borrowers. Difference in the unique number of customers is due to the customers having multiple relationships with SFBs, Banks, NBFC-MFIs, NBFCs and Not for Profit MFIs.

# ಅತಿ ಸಣ್ಣ ಉದ್ದಿಮೆಯ ಅವಲೋಕನ

## ಮಾರುಕಟ್ಟೆ ಪಾಲಿನ ಪ್ರವೃತ್ತಿ / ಸಾಲದಾತರ ಮಾದರಿ

**Market Share Trends by Lender type**




| ವಿವರಗಳು | ಮಾರ್'೨೦ | ಜೂನ್'೨೦ | ಸೆಪ್'೨೦ | ಡಿಸ್'೨೦ | ಮಾರ್'೨೧ |
|---|---|---|---|---|---|
| ಬ್ಯಾಂಕುಗಳು | 81,001 | 91,920 | 93,409 | 96,683 | 109,867 |
| ಎಸ್ ಎಫ್ ಬಿ | 38,986 | 39,225 | 42,682 | 38,109 | 38,903 |
| ಎನ್ ಬಿ ಎಫ್ ಸಿ-ಎಂಎಫ್ ಐ | 72,110 | 71,342 | 70,142 | 73,166 | 79,420 |
| ಎನ್ ಬಿ ಎಫ್ ಸಿ | 18,073 | 19,875 | 19,838 | 18,988 | 18,992 |
| ಲಾಭಕ್ಕಾಗಿ ಅಲ್ಲದ ಉದ್ದಿಮೆಗಳು | 1,679 | 1,842 | 1,772 | 1,872 | 2,095 |
| ಒಟ್ಟಾರೆ ಉದ್ದಿಮೆ | 211,849 | 224,204 | 227,843 | 228,818 | 249,277 |
| ಕ್ಯೂಓಕ್ಯೂ ಶೇಕಡಾ ಬೆಳವಣಿಗೆ ದರ | - | 6% | 2% | 0% | 9% |

- ಎಂಎಫ್ಐ ಉದ್ದಿಮೆಯು ಕೊವಿಡ್ ಪೂರ್ವ ಸ್ಥಿತಿಗೆ ಮರಳುತ್ತಿದೆ. ಉದ್ದಿಮೆಯು ಡಿಸೆಂಬರ್ ೨೦೨೦ರಿಂದ ಮಾರ್ಚ್ ೨೦೨೧ರವರೆಗೆ ಶೇಕಡಾ ೯ರಷ್ಟು ಕ್ಯೂಓಕ್ಯೂ ಬೆಳವಣಿಗೆಯನ್ನು ಮತ್ತು ಮಾರ್ಚ್ ೨೦೨೦ರಿಂದ ಮಾರ್ಚ್ ೨೦೨೧ರವರೆಗೆ ಶೇಕಡಾ ೧೮ ವೈಓವೈ ಬೆಳವಣಿಗೆಯನ್ನು ಕಂಡಿದೆ.
- ಸಾಲದಾತರುಗಳಲ್ಲಿ ಬ್ಯಾಂಕುಗಳು ಅತಿ ಹೆಚ್ಚು, ಅಂದರೆ ಶೇಕಡಾ ೩೬ರಷ್ಟು ಬೆಳವಣಿಗೆಯನ್ನು ದಾಖಲಿಸಿವೆ. ತನ್ಮೂಲಕ ಮಾರುಕಟ್ಟೆ ಪಾಲಿನಲ್ಲಿ ಸ್ಥಿರವಾದ ಹೆಚ್ಚಳವನ್ನು ಸಾಧಿಸಿವೆ.
- ಮಾರ್ಚ್ ೨೦೨೦ರಿಂದ ಮಾರ್ಚ್ ೨೦೨೧ರವರೆಗೆ ಎನ್ ಬಿ ಎಫ್ ಸಿ-ಎಂಎಫ್ ಐ ಮತ್ತು ಎಸ್ ಎಫ್ ಬಿ ಗಳ ಮಾರುಕಟ್ಟೆ ಪಾಲು ಅಂದಾಜು ಶೇಕಡಾ 2ರಷ್ಟು ಇಳಿಕೆಯಾಗಿದೆ.


# ವಿತರಣಾ ಪ್ರವೃತ್ತಿ



# ಸಂಸ್ಥಾನುಸಾರ ವಿತರಣಾ ಪ್ರವೃತ್ತಿ

## ಮಾರುಕಟ್ಟೆ ಪಾಲಿನ ಪ್ರವೃತ್ತಿ/ಸಾಲದಾತರ ಮಾದರಿ

**Market Share Trends by Lender type**





No. of Loans Disbursed (in lakh)

| ಸಾಲದಾತರ ಮಾದರಿ | JFM' 20 | AMJ' 20 | JAS' 20 | OND' 20 | JFM' 21 |
|---|---|---|---|---|---|
| Banks | 83 | 14 | 47 | 102 | 112 |
| SFBs | 31 | 5 | 12 | 20 | 31 |
| NBFC-MFIs | 73 | 2 | 33 | 65 | 78 |
| NBFCs | 11 | 1 | 5 | 8 | 11 |
| Not for Profit MFIs | 3 | 1 | 2 | 2 | 3 |
| Total Industry | 201 | 23 | 99 | 197 | 235 |

- ಜೆಎಫ್ಎಂ'೨೧ ರ ವಿತರಣೆಯು ೯೩೧೦೦ ಕೋಟಿ ರೂಪಾಯಿಗಳಷ್ಟಿದ್ದು, ಜೆಎಫ್ಎಂ'೨೦ರಿಂದ ಜೆಎಫ್ಎಂ'೨೧ರವರೆಗೆ ಎಲ್ಲ ವಿಭಾಗಗಳಲ್ಲಿಯೂ ಶೇಕಡಾ ೨೬ ರಷ್ಟು ವೈಓವೈ ಬೆಳವಣಿಗೆಯನ್ನು ದಾಖಲಿಸಿದೆ.
- ಜೆಎಫ್ಎಂ'೨೦ರಿಂದ ಜೆಎಫ್ಎಂ'೨೧ರವರೆಗೆ ಸಾಲ ನೀಡಿ ಕೆಯು ಶೇಕಡಾ ೧೭ರಷ್ಟು ಬೆಳವಣಿಗೆ ಕಂಡಿದೆ.
- ಜೆಎಫ್ಎಂ'೨೦ರಿಂದ ಜೆಎಫ್ಎಂ'೨೧ರವರೆಗೆ ಸಾಲ ವಿತರಣೆಯು ಶೇಕಡಾ ೩೫ ರಷ್ಟು ಬೆಳವಣಿಗೆ ಸಾಧಿಸಿದೆ.

# ಉದ್ದಿಮೆಯ ಟಿಕೆಟ್ ಗಾತ್ರ ಪ್ರವೃತ್ತಿ




ವಿತರಣೆಯಾದ ಸಾಲಗಳ ಸಂಖ್ಯೆ (ಲಕ್ಷಗಳಲ್ಲಿ)

| ಟಿಕೆಟ್ ಗಾತ್ರ | ಜೆಎಫ್ ಎಂ'೨೦ | ಎಎಂ ಜೆ'೨೦ | ಜೆಎಎಸ್'೨೦ | ಓಎನ್ ಡಿ'೨೦ | ಜೆಎಫ್ಎಂ'೨೧ | ವೈಓವೈ ಬೆಳವಣಿಗೆಯ ಶೇಕಡಾ ದರ |
|---|---|---|---|---|---|---|
| 0K-10K | 9 | 2 | 4 | 34 | 19 | 111% |
| 10K-20K | 12 | 10 | 16 | 20 | 19 | 58% |
| 20K-30K | 46 | 2 | 18 | 33 | 39 | -15% |
| 30K-40K | 63 | 3 | 24 | 44 | 59 | -6% |
| 40K-50K | 33 | 2 | 18 | 29 | 38 | 15% |
| 50K-60K | 19 | 2 | 10 | 18 | 28 | 47% |
| 60K Plus | 19 | 2 | 9 | 19 | 33 | 74% |
| Total | 201 | 23 | 99 | 197 | 235 | 17% |
| Q-o-Q loan disbursal growth rate % | - | -89% | 330% | 99% | 19% | - |
| All India ATS (`) | 36,723 | 28,577 | 35,519 | 33,190 | 39,627 | - |
| Q-o-Q ATS growth rate % | - | -22% | 24% | -7% | 19% | - |

- ಜೆಎಫ್ಎಂ ೨೦೨೧ರಲ್ಲಿ ೨೦ಕೆ-೪೦ಕೆ ಟಿಕೆಟ್ ಗಾತ್ರ ವಿಭಾಗದಲ್ಲಿ ೯೮ ಲಕ್ಷ ಸಾಲಗಳು ವಿತರಣೆಯಾಗಿವೆ. ಇದು ಒಟ್ಟು ವಿತರಣೆಯಾದ ಸಾಲಗಳ ಸಂಖ್ಯೆಗೆ ಶೇಕಡಾ ೪೨ರಷ್ಟಿದೆ.
- ೦ಕೆ-೧೦ಕೆ ವಿಭಾಗದಲ್ಲಿ ಅತಿ ಹೆಚ್ಚು, ಅಂದರೆ ಶೇಕಡಾ ೧೧೧ರಷ್ಟು ವೈಓವೈ ಬೆಳವಣಿಗೆ ಆಗಿದೆ. ಓಎನ್ ಡಿ ೨೦೨೦ರಿಂದ ಜೆಎಫ್ಎಂ ೨೦೨೧ರವರೆಗೆ ಸಾಲ ವಿತರಣೆ ಮತ್ತು
- ಇಡೀ ಭಾರತದ ಸರಾಸರಿ ಟಿಕೆಟ್ ಗಾತ್ರವು ಶೇಕಡಾ ೧೯ರಷ್ಟು ಬೆಳೆದಿದೆ.

EQUIFAX


sidbi

# ಉದ್ದಿಮೆಯ ಅಪಾಯದ ಚಿತ್ರಣ



## ಡೆಲಿಕ್ವೆನ್ಸಿ /ಡೇಸ್ ಪಾಸ್ಟ್ ಡ್ಯು

### ೧-೧೭೯ ಡೇಸ್ ಪಾಸ್ಟ್ ಡ್ಯು




Delinquency by Days Past Due

| ರಿಪೋರ್ಟಿಂಗ್ ಕ್ವಾರ್ಟರ್ | ೧-೨೯ ಡೇಸ್ ಪಾಸ್ಟ್ ಡ್ಯು | ೩೦-೫೯ ಡೇಸ್ ಪಾಸ್ಟ್ ಡ್ಯು | ೬೦-೮೯ ಡೇಸ್ ಪಾಸ್ಟ್ ಡ್ಯು | ೯೦-೧೭೯ ಡೇಸ್ ಪಾಸ್ಟ್ ಡ್ಯು | ೧-೧೭೯ ಡೇಸ್ ಪಾಸ್ಟ್ ಡ್ಯು |
|---|---|---|---|---|---|
| ಮಾರ್ಚ್'೨೦ | 2.06% | 0.50% | 0.42% | 0.86% | 3.84% |
| ಜೂನ್'೨೦ | 1.30% | 1.03% | 0.43% | 0.43% | 3.20% |
| ಸೆಪ್'೨೦ | 15.35% | 3.47% | 0.39% | 0.63% | 19.83% |
| ಡಿಸ್'೨೦ | 7.50% | 4.73% | 3.49% | 4.96% | 20.68% |
| ಮಾರ್'೨೧ | 4.55% | 2.90% | 2.01% | 4.12% | 13.59% |

- ೧-೧೭೯ ಡೇಸ್ ಪಾಸ್ಟ್ ಡ್ಯು ಅಪರಾಧಿತ್ವವು ಡಿಸೆಂಬರ್ ೨೦೨೦ರ ಶೇಕಡಾ ೨೦.೬೮ ರಿಂದ ಮಾರ್ಚ್ ೨೦೨೧ರಲ್ಲಿ ಶೇಕಡಾ ೧೩.೫೯ರವರೆಗೆ ಇಳಿಕೆ ಕಂಡಿತು.
- ಡಿಸೆಂಬರ್ ೨೦೨೦ಕ್ಕೆ ಹೋಲಿಸಿದರೆ ೧-೨೯ ಡೇಸ್ ಪಾಸ್ಟ್ ಡ್ಯು ಅಪರಾಧಿತ್ವ ಬಕೆಟುಗಳು ಶೇಕಡಾ ೩ರಷ್ಟು ಇಳಿಕೆ ಕಂಡಿವೆ.
- ೬೦-೮೯ ಡೇಸ್ ಪಾಸ್ಟ್ ಡ್ಯು ಅಪರಾಧಿತ್ವ ಬಕೆಟು ಮಾರ್ಚ್ ೨೦೨೧ರಲ್ಲಿ ಅತಿ ಕಡಿಮೆ ಅಪರಾಧಿತ್ವವನ್ನು ಸಾಕ್ಷೀಕರಿಸಿತು.

**Note:** Delinquencies calculated basis POS.

EQUIFAX

sidbi

# ಭೌಗೋಲಿಕ ಅನಾವರಣ



EQUIFAX

ಜ್ಞಾನದಿಂದ ವಿಶ್ವವನ್ನು ಸಶಕ್ತಗೊಳಿಸುವುದು ™

# ಉನ್ನತ ಹತ್ತು ರಾಜ್ಯಗಳ ಪೋರ್ಟ್ ಫೋಲಿಯೋ ಪ್ರವೃತ್ತಿ

| ಮೇಲ್ಸ್ತರದ ೧೦ ರಾಜ್ಯಗಳು | ಮಾರ್ಚ್'೨೦ ಪೋರ್ಟ್ ಫೋಲಿಯೋ ಸಾಲಬಾಕಿ (ಕೋಟಿ ರೂಗಳಲ್ಲಿ) | Rank | ಮಾರ್ಚ್' ಪೋರ್ಟ್ ಫೋಲಿಯೋ ಸಾಲಬಾಕಿ (ಕೋಟಿ ರೂಗಳಲ್ಲಿ) | Rank | ವೈಓವೈ ಶೇಕಡಾ ಪ್ರಗತಿ |
|---|---|---|---|---|---|
| ಪಶ್ಚಿಮ ಬಂಗಾಳ | 29,858 | 1 | 37,201 | 1 | 25% |
| ತಮಿಳು ನಾಡು | 27,077 | 2 | 31,248 | 2 | 15% |
| ಬಿಹಾರ್ | 25,427 | 3 | 28,997 | 3 | 14% |
| ಕರ್ನಾಟಕ | 17,594 | 4 | 20,330 | 4 | 16% |
| ಮಹಾರಾಷ್ಟ್ರ | 15,352 | 5 | 17,224 | 6 | 12% |
| ಉತ್ತರ ಪ್ರದೇಶ | 14,478 | 6 | 18,011 | 5 | 24% |
| ಒಡಿಷಾ | 12,489 | 7 | 14,178 | 8 | 14% |
| ಮಧ್ಯ ಪ್ರದೇಶ | 12,354 | 8 | 15,006 | 7 | 21% |
| ಅಸ್ಸಾಂ | 11,025 | 9 | 10,498 | 10 | -5% |
| ರಾಜಸ್ಥಾನ | 8,590 | 10 | 11,085 | 9 | 29% |
| ಉನ್ನತ ೧೦ ರಾಜ್ಯಗಳು | 174,244 | - | 203,778 | - | 17% |
| ಇತರೆ | 37,605 | - | 45,499 | - | 21% |
| ಉದ್ದಿಮೆ | 211,849 | - | 249,277 | - | 18% |


- ಮಾರ್ಚ್ ೨೦೨೦ರಿಂದ ಮಾರ್ಚ್ ೨೦೨೧ರವರೆಗೆ ಪಿಓಎಸ್ ಗೆ ಶೇಕಡಾ ೮೦ಕ್ಕಿಂತ ಹೆಚ್ಚಿನ ಕೊಡುಗೆ ಉನ್ನತ ದ ೧೦ ರಾಜ್ಯಗಳದ್ದಾಗಿದೆ.
- ಪಶ್ಚಿಮ ಬಂಗಾಳವು ಅತಿ ಹೆಚ್ಚಿನ ಪಿಓಎಸ್, ಅಂದರೆ ಶೇಕಡಾ ೨೫ ವೈಓವೈ ಬೆಳವಣಿಗೆ (ಉದ್ದಿಮೆಯ ಬೆಳವಣಿಗೆ ಶೇಕಡಾ ೧೮) ತೋರಿಸಿದ ಎಲ್ಲ ರಾಜ್ಯಗಳಿಗಿಂತ ಉನ್ನತ
- ಮಟ್ಟದಲ್ಲಿದೆ.

ಮಾರ್ಚ್ ೨೦೨೦ರಲ್ಲಿ ೫ನೆ ಸ್ಥಾನದಲ್ಲಿದ್ದ ಮಹಾರಾಷ್ಟ್ರವು ಮಾರ್ಚ್ ೨೦೨೧ರಲ್ಲಿ ೬ನೆಯ ಸ್ಥಾನಕ್ಕೆ ಇಳಿದಿದೆ.

**Note:** Selection of Top 10 states is basis POS of March 2020

Ranks assigned basis POS

# ಮೇಲಸ್ತರದ ಹತ್ತು ರಾಜ್ಯಗಳು ೯೦+ ಡೆಲಿಕ್ವೆನ್ಸಿ ಪ್ರವೃತ್ತಿ




- ಮಾರ್ಚ್ ೨೦೨೧ರ ವೇಳೆಗೆ ಅಸ್ಸಾಂ, ಪಶ್ಚಿಮ ಬಂಗಾಳ ಮತ್ತು ಮಹಾರಾಷ್ಟ್ರಗಳ ೯೦+ ಡೆಲಿಕ್ವೆನ್ಸಿ ಉದ್ದಿಮೆಯ ಡೆಲಿಕ್ವೆನ್ಸಿ ಕ್ಕಿಂತ ಹೆಚ್ಚಿದೆ. ಮಾರ್ಚ್ ೨೦೨೦ಕ್ಕೆ
- ಹೋಲಿಸಿದಲ್ಲಿ ಮಾರ್ಚ್ ೨೦೨೧ರಲ್ಲಿ ೯೦+ ಡೆಲಿಕ್ವೆನ್ಸಿಯು ಕರ್ನಾಟಕವನ್ನು ಹೊರತು ಪಡಿಸಿ ಎಲ್ಲ ಮೇಲ್ಸ್ತರದ ರಾಜ್ಯಗಳಲ್ಲಿಯೂ ಹೆಚ್ಚಿದೆ.

**Note:** * Selection of Top 10 states is basis POS of March 2020.


Delinquencies calculated basis POS.

# ಕರ್ನಾಟಕ ರಾಜ್ಯ ಸಮಗ್ರ ಚಿತ್ರಣ



EQUIFAX ಜ್ಞಾನದಿಂದ ವಿಶ್ವವನ್ನು ಸಶಕ್ತಗೊಳಿಸುವುದು ™

# ಕರ್ನಾಟಕ ರಾಜ್ಯದ ನೋಟ




| ೩೧-೦೩-೨೦೨೧ರಲ್ಲಿ ಕರ್ನಾಟಕ | ಬ್ಯಾಂಕು ಗಳು | ಎಸ್ ಎಫ್ ಬಿ ಎಫ್ ಸಿ | ಎನ್ ಬಿ ಎಫ್ ಸಿ-ಎಂಎಫ್ ಐ ಲಾಭಕ್ಕಾಗಿ ಅಲ್ಲದ ಉದ್ದಿಮೆ | | ಎನ್ ಬಿ | ಒಟ್ಟಾರೆ ಉದ್ದಿಮೆಯ ಲಾಭ |
|---|---|---|---|---|---|---|
| ಸಜೀವ ಸಾಲಗಳು ('000) | 2,612 | 1,351 | 3,844 | 868 | 1 | 8,676 |
| ಪೋರ್ಟ್ ಫೋಲಿಯೋ ಸಾಲಬಾಕಿ(ಕೋಟಿ ರೂಗಳಲ್ಲಿ) | 5,455 | 3,059 | 9,734 | 2,078 | 4 | 20,330 |
| ಪೋರ್ಟ್ ಫೋಲಿಯೋ ಸಾಲಬಾಕಿಯ ಮಾರುಕಟ್ಟೆ ಪಾಲು (ಕೋಟಿ ರೂಗಳಲ್ಲಿ) | 27% | 15% | 48% | 10% | 0% | - |
| ವಿತರಣಾ ಮೊತ್ತ (ಕೋಟಿ ರೂಗಳಲ್ಲಿ) – ಜೆಎಫ್ಎಂ'೨೧ | 2,532 | 914 | 3,584 | 524 | 1 | 7,555 |
| ಸರಾಸರಿ ಟಿಕೆಟ್ ಗಾತ್ರ (ರೂ) - ಜೆಎಫ್ಎಂ'೨೧ | 33,933 | 37,389 | 38,315 | 41,603 | 44,856 | 36,814 |
| ೩೦+ ಡೆಲಿಕ್ವೆನ್ಸಿ (ಪಿಓಎಸ್) | 3.48% | 5.71% | 3.02% | 6.29% | 1.77% | 3.88% |
| ೯೦+ ಡೆಲಿಕ್ವೆನ್ಸಿ (ಪಿಓಎಸ್) | 0.87% | 2.71% | 1.72% | 2.62% | 0.49% | 1.73% |

- ೩೧.೦೩.೨೦೨೧ಕ್ಕೆ ಕರ್ನಾಟಕ ರಾಜ್ಯದ ಪೋರ್ಟ್ ಫೋಲಿಯೋ ಸಾಲಬಾಕಿಯು ರೂ.೨೦೩೩೦ ಕೋಟಿಗಳಷ್ಟಿತ್ತು.
- ಎನ್ ಬಿ ಎಫ್ ಸಿ-ಎಂಎಫ್ ಐಗಳು ಅತಿ ಹೆಚ್ಚಿನ ಮಾರುಕಟ್ಟೆ ಪಾಲು, ಅಂದರೆ ಪೋರ್ಟ್ ಫೋಲಿಯೋ
- ಸಾಲಬಾಕಿಯ ೪೮ ಶೇಕಡವಾರು ಹೊಂದಿದ್ದವು.

ಜೆಎಫ್ಎಂ'೨೧ರಲ್ಲಿ ಕರ್ನಾಟಕವು ರೂ.೭೫೫೫ ಕೋಟಿ ಸಾಲವನ್ನು ವಿತರಣೆ ಮಾಡಿತ್ತು.

- ಎನ್ ಬಿ ಎಫ್ ಸಿ, ಎನ್ ಬಿ ಎಫ್ ಸಿ-ಎಂಎಫ್ ಐ, ಎಸ್ ಎಫ್ ಬಿ ಮತ್ತು ಲಾಭಕ್ಕಾಗಿ ಅಲ್ಲದ ಉದ್ದಿಮೆಗಳ ಎಟಿಎಸ್,
- ಕರ್ನಾಟಕ ರಾಜ್ಯದ ಬ್ಯಾಂಕುಗಳ ಎಟಿಎಸ್ ಗಿಂತ ಹೆಚ್ಚಿತ್ತು. ಲಾಭಕ್ಕಾಗಿ ಅಲ್ಲದ ಉದ್ದಿಮೆಯ ೯೦+ ಡೆಲಿಕ್ವೆನ್ಸಿ ಕರ್ನಾಟಕ ರಾಜ್ಯದಲ್ಲಿ ೧ ಪ್ರತಿಶತ ಕ್ಕಿಂತ ಕಡಿಮೆ ಇತ್ತು.


# ಕರ್ನಾಟಕದ ವಿತರಣಾ ಪ್ರವೃತ್ತಿ

ವಿತರಣೆಯಾದ ಸಾಲಗಳ ಸಂಖ್ಯೆ (ಸಾವಿರಗಳಲ್ಲಿ)

| ಟಿಕೆಟ್ ಗಾತ್ರ | ಜೆಎಫ್‌ಎಂ'೨೦ | ಎಎಂಜೆ'೨೦ | ಜೆಎಎಸ್'೨೦ | ಓಎನ್ ಡಿ'೨೦ | ಜೆಎಫ್‌ಎಂ'೨೧ |
|---|---|---|---|---|---|
| ೦ಕೆ-೧೦ಕೆ | 253 | 21 | 94 | 232 | 185 |
| ೧೦ಕೆ-೨೦ಕೆ | 231 | 94 | 188 | 159 | 193 |
| ೨೦ಕೆ-೩೦ಕೆ | 375 | 10 | 137 | 267 | 347 |
| ೩೦ಕೆ-೪೦ಕೆ | 480 | 16 | 200 | 398 | 496 |
| ೪೦ಕೆ-೫೦ಕೆ | 272 | 9 | 152 | 242 | 326 |
| ೫೦ಕೆ-೬೦ಕೆ | 135 | 6 | 82 | 173 | 226 |
| ೬೦ಕೆ ಪ್ಲಸ್ | 83 | 4 | 98 | 236 | 278 |
| ಒಟ್ಟು | 1,829 | 160 | 951 | 1,707 | 2,051 |

- ಕರ್ನಾಟಕ ರಾಜ್ಯದ ಸಾಲ ನೀಡಿಕೆಯು ಜೆಎಫ್‌ಎಂ'೨೦ ರಿಂದ ಜೆಎಫ್‌ಎಂ'೨೧ ರವರೆಗೆ ಶೇಕಡಾ ೧೨ರಷ್ಟು ವೈಓವೈ ಬೆಳವಣಿಗೆಯನ್ನು ಕಂಡಿತು.
- ಎಎಂಜೆ'೨೦ನ್ನು ಹೊರತು ಪಡಿಸಿ ಇನ್ನೆಲ್ಲ ತ್ರೈಮಾಸಿಕಗಳಲ್ಲೂ ೩೦ಕೆ-೪೦ಕೆ ವರ್ಗದಲ್ಲಿ ಅತಿ ಹೆಚ್ಚು ಸಾಲಗಳನ್ನು ವಿತರಣೆ ಮಾಡಲಾಗಿದೆ.

# ಪೋರ್ಟ್ ಫೋಲಿಯೋ ಪ್ರವೃತ್ತಿಗಳು





ಮಾರ್ಚ್ ೨೦೨೦ ರಿಂದ ಮಾರ್ಚ್ ೨೦೨೧ರವರೆಗೆ ಕರ್ನಾಟಕ ರಾಜ್ಯದಲ್ಲಿ ಪೋರ್ಟ್ ಫೋಲಿಯೋ ಸಾಲಬಾಕಿಯು ಶೇಕಡಾ ೧೬ರಷ್ಟು ಬೆಳೆಯಿತು. ಪೋರ್ಟ್ ಫೋಲಿಯೋ ಸಾಲಬಾಕಿಯಲ್ಲಿ ಎಲ್ಲ ತ್ರೈಮಾಸಿಕಗಳಲ್ಲೂ ಮಾರುಕಟ್ಟೆಯ ಅತಿ ಹೆಚ್ಚಿನ ಪಾಲು ಎನ್ ಬಿ ಎಫ್ ಸಿ-ಎಂಎಫ್ ಐಗಳದ್ದು; ನಂತರದ ಪಾಲು ಬ್ಯಾಂಕುಗಳದ್ದು.

ಬ್ಯಾಂಕುಗಳ ಮಾರುಕಟ್ಟೆ ಪಾಲು ಬೆಳೆಯುತ್ತಿದೆ. ಮಾರ್ಚ್ ೨೦೨೦ರಲ್ಲಿ ಶೇಕಡಾ ೨೦ರಷ್ಟು ಇತ್ತು, ಮಾರ್ಚ್ ೨೦೨೧ರ ವೇಳೆಗೆ ಅದು ಶೇಕಡಾ ೨೭ರಷ್ಟು ಏರಿಕೆಯಾಯಿತು.

# ಕರ್ನಾಟಕದ ಡೆಲಿಕ್ವೆನ್ಸಿ ಪ್ರವೃತ್ತಿಗಳು

೯೦+ ಡೆಲಿಕ್ವೆನ್ಸಿ




- ಮಾರ್ಚ್ ೨೦೨೦ಕ್ಕೆ ಹೋಲಿಸಿದಲ್ಲಿ ಮಾರ್ಚ್ ೨೦೨೧ರಲ್ಲಿ ಒಟ್ಟಾರೆಯಾಗಿ ಕರ್ನಾಟಕ ರಾಜ್ಯದಲ್ಲಿ ೯೦+ ಡೆಲಿಕ್ವೆನ್ಸಿ ಪ್ರಗತಿ ಹೊಂದಿದೆ. ಮಾರ್ಚ್ ೨೦ರಲ್ಲಿ ಶೇಕಡಾ 2.೪೧ ಇದ್ದದ್ದು ಮಾರ್ಚ್ ೨೦೨೧ರಲ್ಲಿ ಶೇಕಡಾ ೧.೭೩ಗೆ ಇಳಿಕೆ ಆಗಿದೆ.
- ಬ್ಯಾಂಕುಗಳಲ್ಲಿ ೯೦+ ಡೆಲಿಕ್ವೆನ್ಸಿ ಮಾರ್ಚ್ ೨೦೨೦ರಲ್ಲಿ ಶೇಕಡಾ ೩.೧೪ ಇದ್ದದ್ದು ಮಾರ್ಚ್ ೨೦೨೧ರಲ್ಲಿ ಶೇಕಡಾ ೦.೮೭ಕ್ಕೆ ಇಳಿಕೆ ಆಗಿದೆ.


ಸೂಚನೆ: ಡೆಲಿಕ್ವೆನ್ಸಿ ಅಳೆಯುವ ಸೂಚಿ ಪಿಓಎಸ್.


# ಮಹತ್ವಾಕಾಂಕ್ಷೆಯ ಜಿಲ್ಲೆಗಳು



ಜ್ಞಾನದಿಂದ ವಿಶ್ವವನ್ನು ಸಶಕ್ತಗೊಳಿಸುವುದು ™

# ಮಹತ್ವಾಕಾಂಕ್ಷೆಯ ಜಿಲ್ಲೆಗಳು- ಮಾರ್ಚ್ ೨೦೨೧ರ ಅವಲೋಕನ




## ಮಹತ್ವಾಕಾಂಕ್ಷೆಯ ಜಿಲ್ಲೆಗಳ ಪ್ರಗತಿ ವಿವರ

| ಡಿಸೆಂಬರ್ ೨೦೧೮ | ಮಾರ್ಚ್ ೨೦೨೧ | ಪ್ರಗತಿ% |
|---|---|---|
| ಸಜೀವ ಗ್ರಾಹಕರ ಒಳ ನುಗ್ಗುವಿಕೆ (ಸಾವಿರಗಳಲ್ಲಿ) | 4,155 | 8,544 |
| ವಿತರಣೆಯಾದ ಮೊತ್ತ (ಕೋಟಿ ರೂಗಳಲ್ಲಿ) | 14,374 * | 27,397 ** |
| ಜೀವಂತ ಸಾಲಗಳು (ಸಾವಿರಗಳಲ್ಲಿ) | 6,925 | 13,681 |
| ಪೋರ್ಟ್ ಫೋಲಿಯೋ ಸಾಲಬಾಕಿ (ಕೋಟಿಗಳಲ್ಲಿ)(`crore) | 11,175 | 31,856 |
| 30+ Delinquency | 1.54% | 7.68% |

ಮಾರ್ಚ್ ೨೦೨೧ರಲ್ಲಿ ಮಹತ್ವಾಕಾಂಕ್ಷೆಯ ಜಿಲ್ಲೆಗಳ ಪೋರ್ಟ್ ಫೋಲಿಯೋ ಸಾಲಬಾಕಿ ರೂ.೩೧೮೫೬ ಕೋಟಿ ರೂ. ಗಳು. ಅದರಲ್ಲಿ ಶೇಕಡಾ ೪೩ರಷ್ಟು ಪಾಲು ಬ್ಯಾಂಕುಗಳದ್ದು; ಶೇಕಡಾ ೩೫ರಷ್ಟು ಪಾಲು ಎನ್ ಬಿ ಎಫ್ ಸಿ-ಎಂಎಫ್ ಐ ಗಳದ್ದು.

೩೦+ ಮತ್ತು ೯೦+ ಡೆಲಿಕ್ವೆನ್ಸಿ ಎನ್ ಬಿ ಎಫ್ ಸಿ ಗಳಲ್ಲಿ ಅತಿ ಹೆಚ್ಚು ಇದ್ದು, ನಂತರದ ಸ್ಥಾನ ಬ್ಯಾಂಕುಗಳದ್ದಾಗಿತ್ತು. ಡಿಸೆಂಬರ್ ೨೦೧೮ರಿಂದ ಮಾರ್ಚ್ ೨೦೨೧ರವರೆಗೆ ಪಿಓಎಸ್ ಶೇಕಡಾ ೧೮೫ ಬೆಳೆದರೆ, ಸಾಲ ವಿತರಣಾ ಮೊತ್ತವು ಶೇಕಡಾ ೯೧ರಷ್ಟು ಬೆಳೆಯಿತು.

ಸೂಚನೆ: *ವಿತರಣೆ ಜನವರಿ ೨೦೧೮ರಿಂದ ಡಿಸೆಂಬರ್ ೨೦೧೮ರವರೆಗೆ; **ವಿತರಣೆ ಏಪ್ರಿಲ್ ೨೦೨೦ರಿಂದ ಮಾರ್ಚ್ ೨೦೨೧ರವರೆಗೆ.

ಡೆಲಿಕ್ವೆನ್ಸಿ ಅಳೆಯಲು ಸೂಚಿ ಪಿಓಎಸ್.

# ಕೊವಿಡ್ ೧೯ ಮತ್ತು ಜಾಗತಿಕ ಪ್ರವೃತ್ತಿ




# ವಿಭಾಗೀಯ ಮಾರುಕಟ್ಟೆ ಪಾಲು

ಅತಿ ಸಣ್ಣ ಉದ್ದಿಮೆಯ ಮೇಲೆ ಕೊವಿಡ್-೧೯ ರ ಪರಿಣಾಮವನ್ನು ಕಂಡು ಹಿಡಿಯಲು ಪ್ರಾದೇಶಿಕವಾಗಿ ಸಾಲದಾತರ ಮಾರುಕಟ್ಟೆ ಪಾಲು ಮತ್ತು ಸರಾಸರಿ ಟಿಕೆಟ್ ಗಾತ್ರಕ್ಕೆ ಅನುಗುಣವಾಗಿ ಸಾಲ ವಿತರಣಾ ಪ್ರವೃತ್ತಿಯನ್ನು ವಿಶ್ಲೇಷಿಸಲಾಯಿತು. ಸಾಲದಾತರು ನೀಡಿದ ಮಾಹಿತಿಯನ್ವಯ ಪ್ರದೇಶಗಳನ್ನು ವಿಭಾಗಿಸಲಾಗಿದೆ. ಜೆಎಫ್‌ಎಂ'೨೦ನ್ನು ಕೊವಿಡ್-ಪೂರ್ವ ಕಾಲ ಎಂದು ಪರಿಗಣಿಸಿ, ಮಾಹಿತಿಯನ್ನು ವೈಓವೈ ಆಧಾರದ ಮೇಲೆ ಹೋಲಿಸಲಾಗಿದೆ.

## ಸಾಲ ವಿತರಣೆ ಆಧಾರದ ಮೇಲೆ ಮಾರುಕಟ್ಟೆ ಪಾಲು

ಜೆಎಫ್‌ಎಂ'೨೦ — ವಿತರಣಾ ಮೊತ್ತ ರೂ.೭೩೭೩೬ ಕೋಟಿ

ಜೆಎಫ್‌ಎಂ'೨೧ — ವಿತರಣಾ ಮೊತ್ತ ರೂ.೯೩೧೦೦ ಕೋಟಿ





- ಸಾಲ ವಿತರಣೆಯಲ್ಲಿ ಅತಿ ಹೆಚ್ಚಿನ ಸ್ಥಾನ ಪಡೆದಿರುವ ಪೂರ್ವ ವಿಭಾಗವು ಒಟ್ಟು ವಿತರಣೆಯ ಶೇಕಡಾ ೪೫ರಷ್ಟು ದಾಖಲಿಸಿದೆ.
- ಜೆಎಫ್‌ಎಂ'೨೦ರಲ್ಲಿ ಒಟ್ಟಾರೆ ಮಾರುಕಟ್ಟೆ ಪಾಲು ಪ್ರವೃತ್ತಿಗಳು ಹೆಚ್ಚು ಕಮ್ಮಿ ಸಮನಾಗಿವೆ; ಉತ್ತರ ವಿಭಾಗವು ಶೇಕಡಾ ೧ರಷ್ಟು ಹೆಚ್ಚಳ ಕಂಡಿದ್ದರೆ, ದಕ್ಷಿಣವು ವಿಭಾಗವು ಶೇಕಡಾ ಒಂದರಷ್ಟು ಇಳಿಕೆ ಕಂಡಿದೆ.

ಸೂಚನೆ:

ಪೂರ್ವ ವಿಭಾಗ: ಅರುಣಾಚಲ ಪ್ರದೇಶ, ಅಸ್ಸಾಂ, ಬಿಹಾರ್, ಛತ್ತಿಸ್ ಗಢ, ಝಾರ್ಖಂಡ, ಮಣಿಪುರ, ಮೇಘಾಲಯ, ಮಿಜೋರಾಮ್, ನಾಗಾಲ್ಯಾಂಡ್, ಒರಿಸ್ಸಾ, ಸಿಕ್ಕಿಂ, ತ್ರಿಪುರ ಮತ್ತು ಪಶ್ಚಿಮ ಬಂಗಾಳ.
ಪಶ್ಚಿಮ ವಿಭಾಗ: ದಾದ್ರಾ ಮತ್ತು ನಾಗರ್ ಹವೇಲಿ, ಡಾಮನ್ ಮತ್ತು ದಿಯು, ಗೋವಾ, ಗುಜರಾತ್, ಮಧ್ಯ ಪ್ರದೇಶ, ಮಹಾರಾಷ್ಟ್ರ ಮತ್ತು ರಾಜಸ್ಥಾನ.
ಉತ್ತರ ವಿಭಾಗ: ಚಂಡೀಗಢ, ದೆಹಲಿ, ಹರಿಯಾಣ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ಉತ್ತರ ಪ್ರದೇಶ ಮತ್ತು ಉತ್ತರಾಖಂಡ.
ದಕ್ಷಿಣ ವಿಭಾಗ: ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಆಂಧ್ರ ಪ್ರದೇಶ, ಕರ್ನಾಟಕ, ಕೇರಳ, ಲಕ್ಷದ್ವೀಪ, ಪಾಂಡಿಚೆರಿ, ತಮಿಳುನಾಡು ಮತ್ತು ತೆಲಂಗಾಣ.


# ಪ್ರಾದೇಶಿಕ ಮತ್ತು ಸಾಲದಾತರನ್ವಯ ಮಾರುಕಟ್ಟೆ ಪಾಲು

## ಪ್ರಾದೇಶಿಕ ಮತ್ತು ಸಾಲದಾತರನ್ವಯ ಮಾರುಕಟ್ಟೆ ಪಾಲು / ವಿತರಣಾ ಮೊತ್ತ




- ಬ್ಯಾಂಕುಗಳ ಮಾರುಕಟ್ಟೆ ಪಾಲು ಮಾರ್ಚ್ ೨೦೨೦ರಿಂದ ಮಾರ್ಚ್ ೨೦೨೧ಕ್ಕೆ ಎಲ್ಲ ವಲಯಗಳಲ್ಲೂ ಏರಿಕೆಯಾಗಿದೆ; ಉತ್ತರ ವಲಯವು ಅತಿ ಹೆಚ್ಚು' ಅಂದರೆ ಶೇಕಡಾ ೭ರಷ್ಟು
- ಬೆಳವಣಿಗೆ ತೋರಿಸಿದೆ. ಬ್ಯಾಂಕುಗಳ ಹೊರತಾಗಿ ಕೇವಲ ಎನ್ ಬಿ ಎಫ್ ಸಿ-ಎಂಎಫ್ ಐಗಳು ಮಾತ್ರ, ಅದರಲ್ಲೂ ದಕ್ಷಿಣ ವಲಯದಲ್ಲಿ ಮಾತ್ರ ಬೆಳವಣಿಗೆ ತೋರಿಸಲು ಸಾಧ್ಯವಾಗಿದೆ.

## ವಲಯವಾರು ಸರಾಸರಿ ಟಿಕೆಟ್ ಗಾತ್ರ ಪ್ರವೃತ್ತಿಗಳು




ಜೆಎಫ್‌ಎಂ'೨೦ರಿಂದ ಜೆಎಫ್‌ಎಂ'೨೧ರವರೆಗೆ ದಕ್ಷಿಣ ವಲಯವು ಅತಿ ಹೆಚ್ಚು ವೈಓವೈ ಎಟಿಎಸ್, ಅಂದರೆ

- ಶೇಕಡಾ ೧೩ರಷ್ಟು ಬೆಳವಣಿಗೆಯನ್ನು ತೋರಿಸಿದೆ. ಪಶ್ಚಿಮ ಮತ್ತು ಉತ್ತರ ವಲಯಗಳು ಅದೇ
- ಸಮಯಾವಧಿಯಲ್ಲಿ ಶೇಕಡಾ ೯ರಷ್ಟು ಬೆಳವಣಿಗೆಯನ್ನು ತೋರಿಸಿವೆ.

### ಸಿಡ್ಬಿಯ ಬಗ್ಗೆ:

ಸಿಡ್ಬಿ, ಅಥವಾ ಭಾರತೀಯ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ , ಪಾರ್ಲಿಮೆಂಟಿನ ಅನುಚ್ಛೇದದ, ೧೯೯೦ರ ಅಡಿಯಲ್ಲಿ ಸ್ಥಾಪಿತವಾಯಿತು. ಸಿಡ್ಬಿಯು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ವರ್ಗದ ಉದ್ದಿಮೆಗಳ ಉದ್ಧಾರ, ಧನಸಹಾಯ ಮತ್ತು ಬೆಳವಣಿಗೆ ಎಂಬ ಮೂರು ಮುಖ್ಯ ಉದ್ದೇಶಗಳಿಗಾಗಿ ಸ್ಥಾಪಿತವಾದ, ಮತ್ತು ಅಂಥದೇ ಚಟುವಟಿಕೆ ಹೊಂದಿದ ಸಂಸ್ಥೆಗಳಲ್ಲಿ ಸಾಮರಸ್ಯ ತರುವು ಮುಖ್ಯ ಗುರಿ ಹೊಂದಿದ ಸಂಸ್ಥೆ. ಕಾಲಾನಂತರದಲ್ಲಿ ಸಿಡ್ಬಿಯು ತನ್ನ ವಿವಿಧ ಆರ್ಥಿಕ ಮತ್ತು ಅಭಿವೃದ್ಧಿ ಚಟುವಟಿಕೆಗಳಿಂದ ದೇಶದ ಮೂಲೆಮೂಲೆಗಳಲ್ಲಿಯೂ ಜನರ ಜೀವನವನ್ನು ಸುಧಾರಿಸಿದೆ; ಸಂಪೂರ್ಣ ಎಂಎಸ್ಎಂಇ ಜಾಲದ ಮೇಲೆ ತನ್ನ ಪ್ರಭಾವವನ್ನು ಬೀರಿದೆ; ಅಷ್ಟೇ ಅಲ್ಲದೆ, ಎಂಎಸ್ಎಂಇ ಪರಿಸರದಲ್ಲಿ ಅನೇಕ ನಂಬಲರ್ಹ ಸಂಸ್ಥೆಗಳೊಂದಿಗೆ ಸಂಬಂಧ ಸ್ಥಾಪಿಸಿಕೊಂಡಿದೆ.

ಎಂಎಸ್ಎಂಇ ಜಾಲದಲ್ಲಿನ ಮಾಹಿತಿ ಕೊರತೆಗಳನ್ನು ನೀಗಲು ಸಿಡ್ಬಿಯು ವಿಷನ್2.0 ಅಡಿಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅದರಲ್ಲಿ ಎಂಎಸ್ಎಂಇ ಪಲ್ಸ್ ಕೂಡ ಒಂದು. ಈ ಪುಸ್ತಕವು, ಎಂಎಸ್ಎಂಇಗಳ, ಕ್ರಿಸಿದೆಕ್ಸ್ ನ ಆರೋಗ್ಯದ ಮೇಲೆ ಕಣ್ಣಿಡುತ್ತ, ಸಾಲದಾತರು, ಸಂಸ್ಥೆಗಳು ಇತ್ಯಾದಿಗಳ ಮೇಲೆ ಬೆಳಕು ಚೆಲ್ಲುತ್ತ, ಎಂಎಸ್ಇ ನಾಡಿಯನ್ನು ಅಳೆಯುತ್ತ ಸಂಸ್ಥೆಗಳ ಮಹತ್ವಾಕಾಂಕ್ಷೆಯನ್ನು ಸರಿಯಾಗಿ ಅರ್ಥೈಸಿಕೊಂಡಿದೆ.

## ಅತಿ ಸಣ್ಣ ಉದ್ದಿಮೆಯಲ್ಲಿ ಸಿಡ್ಬಿ

ಅತಿ ಸಣ್ಣ ಉದ್ದಿಮೆಯ ಚಳವಳಿಯಲ್ಲಿ ಸಕ್ರಿಯ ಪಾತ್ರ ವಹಿಸಿರುವ ಸಿಡ್ಬಿಯು ಸಂಸ್ಥೆಗಳಿಗೆ ಧನ ಸಹಾಯ ನೀಡುವ ವಿಷಯದಲ್ಲಿ ದಾಪುಗಾಲಿಟ್ಟಿದೆ. ಮಾರ್ಚ್ ೩೧, ೨೦೨೧ರವರೆಗೆ ಬ್ಯಾಂಕಿನ ವತಿಯಿಂದ ಅತಿ ಸಣ್ಣ ಉದ್ದಿಮೆಗಳಿಗೆ ನೀಡಲಾದ ಒಟ್ಟು ಸಾಲ ರೂ.೨೦೫೬೮ ಕೋಟಿಗಳು.ಇದರಿಂದ ಸಹಾಯ ಪಡೆದ ಒಟ್ಟು ಘಟಕಗಳ ಸಂಖ್ಯೆ ಸುಮಾರು ನಾಲ್ಕು ಕೋಟಿ. ಸಾಲ ಮತ್ತು ಈಕ್ವಿಟಿ ಸಹಾಯವು ಈ ಘಟಕಗಳಿಗೆ ಉತ್ತಮ ಬೆಂಬಲ ನೀಡಿದ್ದಲ್ಲದೆ ಅವುಗಳ ಸಾಮರ್ಥ್ಯ ಹೆಚ್ಚಲು, ಅವುಗಳಲ್ಲಿ ಕಾರ್ಪೊರೇಟ್ ಆಡಳಿತ ಮೈಗೂಡಲು ಕೂಡ ತನ್ನ ಕಂಪ್ಲೈಯನ್ಸ್ ಅಸೆಸ್ಮೆಂಟ್ ಟೂಲ್ಸ್ ಮುಂತಾದವುಗಳಿಂದ ಸಹಕಾರ ನೀಡಿದೆ. ಆಗಷ್ಟೇ ಹುಟ್ಟಿದ ಎಳೆಯ ಕಂದಮ್ಮಗಳಂಥ ಘಟಕಗಳನ್ನು ದಷ್ಟಪುಷ್ಟವಾಗಿ ಬೆಳೆದು ತನ್ನ ಕಾಲ ಮೇಲೆ ತಾನು ನಿಲ್ಲುವಂಥ ಉದ್ದಿಮೆಗಳನ್ನಗಿ ರೂಪಿಸಿದ್ದಲ್ಲದೆ, ನಮ್ಮ ೮ ಪಾರ್ಟ್ನರ್ ಮೈಕ್ರೋ ಫೈನಾನ್ಸ್ ಇಂಡಸ್ಟ್ರಿಗಳನ್ನು ಎಸ್ಎಫ್ ಬಿ/ಯೂನಿವರ್ಸಲ್ ಬ್ಯಾಂಕುಗಳನ್ನಾಗಿ ಪರಿವರ್ತಿಸಲೂ ನೆರವಾಗಿದ್ದೇವೆ. ಇದಲ್ಲದೆ ನಾವು ಹಿಡಿದ ಹೊಸ ಹಾದಿಯು ಏನೆಂದರೆ ಅತಿ ಸಣ್ಣ ಉದ್ದಿಮೆಗಳಿಗೆ ನಮ್ಮ ಪಾಲುದಾರ ಸಂಸ್ಥೆಗಳೊಡನೆ ಮಾಡಿಕೊಂಡ ಒಪ್ಪಂದದ ಮೂಲಕ ನೇರವಾಗಿ ಸಾಲ ನೀಡುವುದು. ಈ ಸಣ್ಣ ಟಿಕೆಟ್ ಗಾತ್ರದ ಸಾಲವನ್ನು ಸುಮಾರು ೫೦೦೦೦ ರೂಪಾಯಿಗಳಿಂದ ೫ ಲಕ್ಷ ರೂಪಾಯಿಗಳವರೆಗೂ ಪಾಲುದಾರ ಸಂಸ್ಥೆಗಳ ಜೊತೆ ಕೈಗೂಡಿಸಿ ನೀಡಲಾಗುವುದು. ಅತಿ ಮುಖ್ಯವಾಗಿ ಮಾರುಕಟ್ಟೆ ದರಕ್ಕಿಂತ ಸಾಕಷ್ಟು ಕಡಿಮೆ ಬಡ್ಡಿ ದರದಲ್ಲಿ ನೀಡುವುದರಿಂದ ಪಿರಮಿಡ್ಡಿನ ಬುಡದಲ್ಲಿರುವ ಘಟಕಗಳನ್ನು ಸಶಕ್ತಗೊಳಿಸುವುದು ಸಾಧ್ಯವಾಗುತ್ತಿದೆ.

## ಈಕ್ವಿಫ್ಯಾಕ್ಸ್ ಬಗ್ಗೆ

ಈಕ್ವಿಫ್ಯಾಕ್ಸ್ ಒಂದು ಜಾಗತಿಕ ಮಾಹಿತಿ ಸಂಗ್ರಹ ಸಂಸ್ಥೆ. ಈ ಸಂಸ್ಥೆಯು ತನ್ನ ನಂಬಿಕೆಗೆ ಅರ್ಹವಾದ ಮಾಹಿತಿ ಸಂಗ್ರಹವನ್ನು ಹೊಸ ರೀತಿಯ ವಿಶ್ಲೇಷಣೆ, ಹೊಸ ತಂತ್ರಜ್ಞಾನ, ಉದ್ಯಮ ಪರಿಣತಿಗಳನ್ನು ಬಳಸಿಕೊಂಡು ಜಾಗತಿಕವಾಗಿ ಸಂಸ್ಥೆಗಳನ್ನೂ, ವ್ಯಕ್ತಿಗಳನ್ನೂ ತನ್ನ ವಿಶ್ಲೇಷಣಾತ್ಮಕ ಮಾಹಿತಿ ನೀಡಿ ಸಶಕ್ತರನ್ನಗಿ ಮಾಡುತ್ತಿದೆ. ಈ ಮಾಹಿತಿ ಮತ್ತು ವಿಶ್ಲೇಷಣೆಯ ನೆರವಿನಿಂದ ಉದ್ದಿಮೆಗಳು ತಮ್ಮ ವ್ಯವಹಾರದಲ್ಲಿ ಹೆಚ್ಚು ಮಾಹಿತಿಪೂರ್ಣವಾದ ಮತ್ತು ಯುಕ್ತವಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿದೆ.

ಅಟ್ಲಾಂಟದಲ್ಲಿ ತನ್ನ ಪ್ರಧಾನ ಕಛೇರಿಯನ್ನು ಹೊಂದಿರುವ ಈಕ್ವಿಫ್ಯಾಕ್ಸ್ ಉತ್ತರ ಅಮೇರಿಕಾ, ಮಧ್ಯ ಮತ್ತು ದಕ್ಷಿಣ ಅಮೇರಿಕಾ, ಯೂರೋಪ್ ಮತ್ತು ಏಷ್ಯಾ ಪೆಸಿಫಿಕ್ ಭೂಭಾಗದಲ್ಲಿರುವ ೨೪ ದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ ಅಥವಾ ಬಂಡವಾಳ ಹೂಡಿದೆ. ಸ್ಟ್ಯಾಂಡರ್ಡ್ ಮತ್ತು ಪೂರ್ಸ್ (ಎಸ್ ಅಂಡ್ ಪಿ) ಸಂಸ್ಥೆಯ ಸದಸ್ಯನಾಗಿರುವ ಇದು ತನ್ನ ಶೇರುಗಳನ್ನು ನ್ಯೂಯಾರ್ಕ್ ಸ್ಟಾಕ್ ಎಕ್ಸ್ಚೇಂಜ್ ಮೂಲಕ ಟ್ರೇಡ್ ಮಾಡುತ್ತಿದೆ. ಈ ಶೇರುಗಳ ಸಂಕೇತ ನಾಮ ಇಎಫ್ಎಕ್ಸ್. ಈಕ್ವಿಫ್ಯಾಕ್ಸ್ ಪ್ರಪಂಚದಾದ್ಯಂತ ೧೧೦೦೦ ಸಿಬ್ಬಂದಿಯನ್ನು ಹೊಂದಿದೆ. ೧೨೦ ವರ್ಷಗಳ ಜಾಗತಿಕ ಇತಿಹಾಸ ಹೊಂದಿರುವ ಈ ಸಂಸ್ಥೆಯು ೨೦೧೦ರಲ್ಲಿ ಭಾರತದಲ್ಲಿ ತನ್ನ ಶಾಖೆಯನ್ನು ತೆರೆಯಿತು. ಸಿಐಸಿ ಆಗಿ ಕಾರ್ಯ ನಿರ್ವಹಿಸಲು ಆರ್ ಬಿ ಐನಿಂದ ಲೈಸೆನ್ಸ್ ಪಡೆಯಿತು. ಕಳೆದ ೯ ವರ್ಷಗಳಲ್ಲಿ ಈ ಸಂಸ್ಥೆಯು ೪೦೦೦ಕ್ಕಿಂತಲೂ ಅಧಿಕ ಗ್ರಾಹಕರನ್ನು ಸಂಪಾದಿಸಿಕೊಂಡಿದ್ದು, ಅದರಲ್ಲಿ ಬ್ಯಾಂಕುಗಳು, ಅತಿ ಸಣ್ಣ ಉದ್ದಿಮೆಗಳು, ಇನ್ಸೂರೆನ್ಸ್ ಮತ್ತು ಎಸ್ ಎಫ್ ಬಿ ಗಳು ಸೇರಿವೆ. ಈ ಗ್ರಾಹಕ ಸದಸ್ಯರು ತಮ್ಮ ಲಕ್ಷಾಂತರ ಭಾರತೀಯ ಗ್ರಾಹಕರ ದೆಮೊಗ್ರಫಿಕ್ ಡೇಟಾ ಮತ್ತು ಸಾಲ ವಸೂಲಾತಿಯ ವಿವರಗಳನ್ನು ನೀಡುತ್ತ ಬಂದಿವೆ. ೨೦೧೪ರಲ್ಲಿ ಈಕ್ವಿಫ್ಯಾಕ್ಸ್ ಒಂದು ಅನಲಿಟಿಕ್ಸ್ ಸಂಸ್ಥೆಯನ್ನು ಸ್ವಾಧೀನ ಪಡಿಸಿಕೊಂಡು ತನ್ನ ಹೆಜ್ಜೆ ಗುರುತುಗಳನ್ನು ಭಾರತದ ನೆಲದಲ್ಲಿ ಮೂಡಿಸಿತು. ಈಕ್ವಿಫ್ಯಾಕ್ಸ್ ಅನಲಿಟಿಕ್ಸ್ ಸಂಸ್ಥೆಯು ಸಂಪೂರ್ಣವಾಗಿ ಈಕ್ವಿಫ್ಯಾಕ್ಸ್ ನ ಸ್ವಾಧೀನದಲ್ಲಿದ್ದು, ಭಾರತದಲ್ಲಿ ಒಂದು ವಿಶ್ಲೇಷಣಾ ಸಂಸ್ಥೆಯಾಗಿದೆ. ಈ ಸಂಸ್ಥೆಯು ತನ್ನ ಸಾಟಿಯಿಲ್ಲದ ಸೇವೆಯ ಮೂಲಕ ಅಸಂಖ್ಯಾತ ಸಂಸ್ಥೆಗಳಿಗೂ, ಅದರ ಗ್ರಾಹಕರಿಗೂ ಏಕಕಾಲದಲ್ಲಿ ಉನ್ನತಿ ಹೊಂದಲು ಕಾರಣಕರ್ತನಾಗಿದೆ.


### Disclaimer

The Microfinance Pulse (Report) is prepared by Equifax Credit Information Services Pvt Ltd (Equifax). By accessing and using the report, the user acknowledges and accepts that such use is subject to this disclaimer. This Report is based on collation of information substantially provided by Microfinance institutions as of March 2021 and who are members of Equifax. While Equifax takes reasonable care in preparing the Report, it shall not be responsible for accuracy, errors and/or omissions caused by inaccurate or inadequate information submitted by Microfinance institutions. Further, Equifax does not guarantee the adequacy or completeness of the information in the Report and/or its suitability for any specific purpose nor is Equifax responsible for any access or reliance on the Report and that Equifax expressly disclaims all such liability. This Report is not a recommendation for rejection/denial or acceptance of any application, product nor any recommendation by Equifax to (i) lend or not to lend and (ii) enter into or not to enter into any financial transaction with the concerned individual/entity. The information contained in the Report does not constitute advice and the user should carry out all necessary analysis that is prudent in its opinion before taking any decision based on the Information contained in this Report. The use of the Report is governed by the provisions of the Credit Information Companies (Regulation) Act 2005, the Credit Information Companies Regulations, 2006, Credit Information Companies Rules, 2006. No part of the Report should be copied, circulated, published without prior approvals.

## CONTACT DETAILS

Equifax Credit Information Services Private Limited

**Unit No. 931, 3rd Floor, Building No. 9,
Solitaire Corporate Park, Andheri Ghatkopar Link Road,
Andheri (East), Mumbai - 400 093**

**Toll Free No.: 1800 2093247**
ecissupport@equifax.com

Small Industries Development Bank of India

**Swavalamban Bhavan, Plot No. C-11, 'G' Block,
Bandra Kurla Complex, Bandra (East),
Mumbai - 400 051 Maharashtra**

**Toll Free No.: 1800 226753**
**www.sidbi.in/en**

Copyright © 2021, Equifax Inc., Atlanta, Georgia. All rights reserved. Equifax is a registered trademarks of Equifax Inc.